ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 544.

ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿ ಅತ್ತಿಬೆಲೆಲಿ ಇದ್ದು ಮೃತಪಟ್ಟ ಅಪ್ಪಾಜಿಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮುನಿಶಾಮಿಗವ್ವಡ, ಮೃತಪಟ್ಟ ಸದರೀ ಅಪ್ಪಾಜಿಗವ್ವಡನಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಅತ್ತಿಬೆಲೆ ಸ್ಥಳದ ಮುನಿಶಾಮಿಗವ್ವಡನು ಸದರೀ ಅತ್ತಿಬೆಲೆ ವಾಸಸ್ಥನಾಗಿ ಮೃತಪಟ್ಟ ಅಪ್ಪಾಜಿಗವ್ವಡನ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವೆನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರರಾದ ಮುನಿಶಾಮಿಗವ್ವಡನ ಅರ್ಜೀಯನ್ನು 1890ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಚಾರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಪ್ಪಾಜಿಗವ್ವಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಆಗಸ್ಟ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ನೋಟೀಸ್.

ಕ್ಯಾಸರೀನಾ ಸೊಪಿಗಳು.

ತಾರೀಖು 27ನೇ ಮಾಹೆ ಜುಲೈ 1890.

1. ಪೀಣ್ಯ, ಗುಬ್ಬಿ, ಕೊಡಗಿಹಳ್ಳಿ ಮತ್ತು ಮಾಲೂರು ಪ್ಲಾಂಟೇಷ್ಣಗಳ ನರಸರಿಗಳಲ್ಲಿ ಸುಮಾರು 10 ಲಕ್ಷ ಕ್ಯಾಸರೀನಾ ಸೊಪಿಗಳು ಖರೀದಿಗೆ ದೊರಿಯುತ್ತವೆ.

2. ಈ ಸೊಪಿಗಳು ಯತ್ತರದಲ್ಲಿ 1 ಅಡಿ ಲಾಗಾಯತು 1½ ಅಡಿ ವರಿವಿಗೆ ಯಿವೆ, ದರ 1,000ಕ್ಕೆ 0—8—0 ಯಂತೆ ಖರೀದಿ ಮಾಬಲಗು ಪಾವತಿ ಮಾಡಿದವರಿಗೆ ಕೊಡಲ್ಪಡುತ್ತವೆ.

3. ಈ ವಿಷಯದಲ್ಲಿ ಯಿನ್ನೇನಾದರು ತಪಸೀಲ್ ತಿಳಿಯಬೇಕಾಗಿ ಯಿದ್ದಲ್ಲಿ ಬೆಂಗಳೂರು ಕೊಟೇಯಲ್ಲಿ ಯಿರುವ ನಮ್ಮ ಆಫೀಸಿಗೆ ಅರ್ಜಿಬರದು ಕೊಳ್ಳಬಹುದು.

ಯಸ್. ಯೆ. ಬಾಪೂರಾವ್,
ಅಸಿಸ್ಟೆಂಟ್ ಕನ್ಸರ್ವೇಟರ್ ಪ್ಲಾಂಟೇಷ್ಣ.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 7ನೇ ಆಗಸ್ಟು 1890.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸಾಲೆಹಾಲ್ ವಿಕೃತಿ ಸಂವತ್ಸರಕ್ಕೆ ದಾಖಲಾಗತಕ್ಕ ಗೋಬಿನ ನೂರು ತಾಲ್ಲೂಕು ಜಂಗಲಿಪಸಾರೆಗೆ ಸಂಮ್ಮಕ್ತಪಟ್ಟ ಈ ಕೆಳಗ ಕಂಡ ಬಾಬುಗಳು ಮಾಮೂಲ್ ಅನುಸರಿಸಿ ಬರುವ ಕಟ್ಟಂಬರ್ ತಿಂಗಳು 15ನೇ ತಾರೀಖು ದಿವಿ 12 ಘಂಟೆಗೆ ಗೋರಬಿದನೂರು ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್ದಾರ್ ಅಥವಾ ಶಿರಸ್ತೇದಾರ್ ರೂಬರೂ ಹರಾಜ್ ಹಾಕಲ್ ಪಡುತ್ತೆ ಯಿಷ್ಟವುಳ್ಳವರು ಸದರೀ ಟೈಮಿಗೆ ಹಾಜರಾಗಿ ಧಾರಾಳವಾಗಿ ಸವಾಲ್ ಮಾಡಬಹುದು.

ಬಾಬುಗಳ ಹೆಸರು.

1 ಶೀತಾಫಲ	1 ಕಲ್ಲುಹುವ್ವು
1 ಪತಂಗಚಕ್ಕೆ	1 ತಾರೆಕಾಯಿ
1 ಕಪಿಲಾರಂಗ ಬುಕಣಿ	1 ಆಳಲೆಕಾಯಿ
1 ಹುಚ್ಚೆಹರಳು	1 ಜೇನು ತುಪ್ಪ
1 ಗೇರುಬೀಜ	1 ಜೇನು ಮೈಣ
1 ತಗರಕಿ ಬೀಜಾ	1 ಬೀಳುಚಕ್ಕೆಮ್ಮಾ
1 ದಿಂಡಗದ ಬಂಕೆ	1 ಬೆಟ್ಟದಣಿಗೆ ಕಾಯಿ

1. ಟೈಂ ಅತಿಕ್ರಮಿಸಿಬರುವ ಸವಾಲ್ ಮಂಜೂರ್ಮಾಡುವದಿಲ್ಲ.

2. ಹರಾಜು ಕೈದಾದ ಕೂಡ್ಲೆ ಆಬೈರ್ ಚಡ ಸವಾಲ್‌ದಾರನು ಕೇಕಡಾ 25 ರೂಪಾಯಿ ತೇವಣಿ ಹಾಜರಮಾಡಬೇಕು ಮತ್ತು ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ಮಂಜೂರಾದ ವಡನೆ ಬಾಕಿ ಮೊಬಲಗು ಹಾಜರ್ ಮಾಡಲು ಖಾತರ್ ಜಾಮೀನು ಕೊಡಬೇಕು.

3. ಮೇಲ್ಕಂಡ ಷರತ್ತಿಗೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಅದರಿಂದ ಮೊಟುಗುವ ಲುಕ್ಸಾನ್ಸ್ ಮೊದಲು ಸವಾಲ್ ದಾರನಿಂದ ರವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

4. ಬಾಬು ಸುಫರ್ದು ಮಾಡತಕ್ಕ ವಿಷಯದಲ್ಲಿ ಡಿಸ್ಟ್ರಿಕ್ಟು ಹುಜೂರು ಹುಕ್ಕುಂ ಪಡೆದು ಮುಂಜೂರ್ಮಾಡಲ್ಪಡುತ್ತೆ.

5. ಜಂಗಲ್ ಶೀತಾಫಲ ವಗೈರೇ ಮೇಲ್ಕಂಡ ಪಸಾರೆ ಬಾಬನ್ನು ಈ ಸೂಲ್ ಡಿಚಂಬರ್ ಆಖೈರುವಳಗಾಗಿ ರೂಢಿಸಿಕೊಳ್ಳಬೇಕು ನಂತರ ಪ್ರವೇಶಮಾಡಕೂಡದು.

6. ಜಂಗಲ್‌ನಲ್ಲಿ ಇರುವ ಗಿಡಗಳನ್ನ ಖಲಲ್ ಮಾಡಕೂಡದು ಫಸಲ್ ಮಟ್ಟಿಗೆ ರೂಢಿಸಿ ಕೊಳ್ಳತಕ್ಕದ್ದಾಗಿ ಯಿರುತ್ತೆ.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ಪ್ರಕಟನೆ.

ಮೈಸೂರು ಷಫರ್ ಮ್ಯುನಿಸಿಪ್ಯಲಿಟಿಗಾಗಿ ಒಬ್ಬ ಹೊವರ್ಸೀರ್ ಬೇಕಾಗಿರುತ್ತೆ, ತಲಬು ರೂ. 25 ಮತ್ತು ಲರ್ವಸ್ ರೂ. 10. ಅಪ್ಲಿಕೇಷರ್ಗಳನ್ನ ಸ್ಃ 1890ನೇ ಇಸವಿ ಆಗಸ್ಟ್ 15ನೇ ತಾರೀಖು ವಳಗಾಗಿ ಈ ಕೆಳಗೆ ರುಜು ಮಾಡಿರುವವರ ಬಳಿಗೆ ಕಳು ಹಿಸತಕ್ಕದ್ದು.

ಮೈಸೂರು,
ತಾರೀಖು 31ನೇ ಜುಲೈ 1890.

ಸ್ಟ್ಯಾಂಡಿಷ್ ಲೀ,
ಮೈಸೂರ ಮ್ಯುನಿಸಿಪಲ್ ಕೊರ್ಡ್
ವೈಸ್ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ

1890ನೇ ಇಸವಿ ಅರ್ಜೀ ನಂಬರ್ 215.

ಮೃತಪಟ್ಟ ಈ. ಚಿತಂಬರಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಆನಂದಮ್ಮನವರು, ಮೃತಪಟ್ಟ ಸದರೀ ಚಿತಂಬರಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕು ದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ಆನಂದಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಚಿತಂಬರಯ್ಯನವರ ಜೊದಗಿ ಬಗ್ಯಾಗಿ ಬರತಕ್ಕ 10,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತು ದಾರಳಾದ ಆನಂದಮ್ಮನವರ ಅರ್ಜೀಯನ್ನು 1890ನೇ ಇಸವಿ ಸೆಪ್ಟಂಬರು ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿತಂಬರಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಆಗಸ್ಟ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಹಾಸನ ಡಿಸ್ಟ್ರಿಕ್ಟು.

1890ನೇ ಇಸವಿ 25ನೇ ಜುಲೈ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಹಾಸನ ಡಿಸ್ಟ್ರಿಕ್ಟು ಅರಕಲ್‌ಗೂಡು ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜವಾಯಿಸಿಕ್ಕೊಳ್ಳತಕ್ಕ ಹಕ್ಕು ದಾರಿಯು ತಾಲ್ಲೂಕು ಕಚ್ಚೇರಿಯಲ್ಲಿ ಸ್ಃ 1890ನೇ ಇಸವಿ ಸೆಪ್ಟಂಬರ್ ತಾರೀಖು 1ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಆಮಲ್ದಾರ್ರು ಅಥವಾ ಶಿರಸ್ತೇದಾರ್ರಾಗಲಿ ಹರಾಜು ಮಾಡಿಸುವರು.

3. ಈ ಹರಾಜಿನ ಚಡ ದರಖಾಸ್ತು ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಂದ ಮುಂಜೂರ್ ಮಾಡುವ ಪರಿಯಂತ್ರ ಖಾಯಂ ಆದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ್ಃ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಇರತಕ್ಕದ್ದು.